ಕೆ.ಎಂ.ಎಫ್. ವತಿಯಿಂದ ತುಪ್ಪ ಮಾರಾಟ

2169 (2724)

ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ): ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕರ್ನಾಟಕ ರಾಜ್ಯದ ಕೆ.ಎ.ಎಫ್.ವತಿಯಿಂದ ಮಾರಾಟ ಮಾಡುತ್ತಿರುವ ತುಪ್ಪವು ಪ್ರಸಿದ್ಧ ಮಾರಾಟ ವಸ್ತು ಆಗಿರುವುದು ನಿಜವಲ್ಲವೆ;

ಆ) ಈ ನಂದಿನಿ ತುಪ್ಪಕ್ಕೆ ಈಶಾನ್ಯ ರಾಜ್ಯಗಳಾದ ಪಶ್ಚಿಮ ಬಂಗಾಳ, ಅಸ್ಸಾಂ, ಮೇಘಾಲಯ, ಸಿಕ್ಕಿಂ ಇತ್ಯಾದಿ ರಾಜ್ಯಗಳಲ್ಲಿ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ನಂದಿನಿ ತುಪ್ಪವನ್ನು ಈಶಾನ್ಯ ರಾಜ್ಯಗಳಿಗೆ ಮಾರಾಟ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು):

ಅ) ಹೌದು.

ಆ) ಹೌದು.

ಇ) ಕರ್ನಾಟಕ ಸಹಕಾರಿ ಹಾಲು ಮಹಾ ಮಂಡಳಿಯಿಂದ ಸಗಟು ಮಾರಾಟಗಾರರನ್ನು ನೇಮಿಸಲಾಗಿದ್ದು ನಂದಿನಿ ತುಪ್ಪವನ್ನು ಇಲ್ಲಿ ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗಿದೆ.

ರಾಜ್ಯದಿಂದ ಹಜ್‌ಗೆ ಯಾತ್ರೆ ಮಾಡುವವರ ಕುರಿತು

2170 (2725)

ಶ್ರೀ ಕೆ.ಎಸ್.ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಶ್ರೀ ಆರ್.ರೋಷನ್‌ಬೇಗ್ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಿಂದ ಪ್ರತಿ ವರ್ಷ ಹಜ್‌ಗೆ ಯಾತ್ರೆ ಮಾಡುವವರ ಸಂಖ್ಯೆ ಎಷ್ಟು?

ಆ) ಹಜ್ ಯಾತ್ರಿಕರಿಗೆ ಸರ್ಕಾರ ಕಲ್ಪಿಸಿರುವ ಅನುಕೂಲಗಳೇನೇನು?

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

ಅ) ರಾಜ್ಯದಿಂದ ಪ್ರತಿ ವರ್ಷ ಹಜ್ ಯಾತ್ರೆ ಮಾಡುವವರ ಸಂಖ್ಯೆ 3500 ರಿಂದ 4500

ಆ) ಸರ್ಕಾರವು ಈ ಕೆಳಕಂಡಂತಹ ಅನುಕೂಲಗಳನ್ನು ಹಜ್ ಯಾತ್ರಿಕರಿಗೆ ಕಲ್ಪಿಸುತ್ತದೆ.

1) ಕರ್ನಾಟಕ ರಾಜ್ಯ ಹಜ್ ಸಮಿತಿಯು ಉಚಿತವಾಗಿ ಅರ್ಜಿಗಳನ್ನು ಒದಗಿಸುತ್ತದೆ.

2) ಹಜ್‌ಯಾತ್ರಿಗಳಿಗೆ ಉಚಿತವಾಗಿ ಕಾಲರ ಮತ್ತು ಮೆನಂಜಿಟೀಸ್ ಚುಚ್ಚುಮದ್ದುಗಳನ್ನು ಹಾಕಿಸಲಾಗುವುದು ಮತ್ತು ತರಬೇತಿಯನ್ನು ನೀಡಲಾಗುವುದು.

3) ಹಜ್ ಕ್ಯಾಂಪ್‌ನಲ್ಲಿ ಉಚಿತ ಊಟ ಮತ್ತು ವಸತಿ ವ್ಯವಸ್ಥೆಯನ್ನು ನೀಡಲಾಗುತ್ತದೆ. ಹಾಗೂ ಹಜ್ ಕ್ಯಾಂಪ್‌ನಿಂದ ವಿಮಾನ ನಿಲ್ದಾಣಕ್ಕೆ ಉಚಿತ ವಾಹನ ಸೌಕರ್ಯ.

4) ಇಮಿಗ್ರೇಷನ್ ಮತ್ತು ಕಸ್ಟಮ್ಸ್ ಕ್ಲಿಯರೆನ್ಸ್‌ಗಳಿಗಾಗಿ ಕ್ಯಾಂಪಿನಲ್ಲಿ ವ್ಯವಸ್ಥೆ ಮಾಡಲಾಗುತ್ತದೆ.

ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳು.

2171 (2726)

ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯೋಜನೆಗಳು ಯಾವುವು?

ಆ) ಹಮ್ಮಿಕೊಳ್ಳಲಾಗಿರುವ ಎಲ್ಲಾ ಯೋಜನೆಗಳು ಕಾರ್ಯಗತಗೊಂಡಿದಯೇ?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಆರ್.ರೋಷನ್ ಬೇಗ್(ಪ್ರವಾಸೋದ್ಯಮ ಮತ್ತು ಹಜ್ ಸಚಿವರು):